ಜೊತೆಗೆ ಟವೆಲ್ ನೀಡುತ್ತ ಕೇಳಿದರು. ಹಳ್ಳದ ಬಳಿಯಿಂದ ಇಲ್ಲಿಗೆ ಬರುವ ತನಕವೂ ಅಸ್ಪಷ್ಟವಾಗಿದ್ದ ಅವರ ಮುಖ, ಶರೀರಾಕೃತಿ ಆ ಬೆಂಕಿಯ ಎದುರು ಸಾಕಷ್ಟು ಸ್ಫುಟವಾಗಿಯೇ ಗೋಚರಿಸಿತ್ತು. ದಪ್ಪವೂ ಅಲ್ಲದ, ತೆಳ್ಳಗೂ ಇರದ ಶರೀರದ, ತುಸು ಎತ್ತರವೇ ಇದ್ದ ಅವರು ಕನಿಷ್ಠ ಎಪ್ಪತ್ತು ವರ್ಷದ ಸನಿಹ ಇರಬಹುದೆಂದು ಸಂತೋಷ ಅಂದಾಜಿಸಿದ. ಹಿಂದೆ ಬಾಚಿದ ಬೆಳ್ಳನೆಯ ವಿರಳ ತಲೆಗೂದಲು, ಕಪೋಲದಿಂದ ಎದೆಯ ತನಕ ಇಳಿದ ಬೆಳ್ಳನೆಯ ಗಡ್ಡ, ಇಂಥ ಚಳಿಯಲ್ಲೂ ಗಿಡ್ಡ ಕಚ್ಚೆಪಂಚೆ, ತೋಳಿಲ್ಲದ ಬನಿಯನ್ ತೊಟ್ಟಿದ್ದರು. ಬೆಂಕಿಯ ಬೆಳಕಿಗೆ ತುಸು ಹೆಚ್ಚಾಗಿಯೇ ಜ್ವಲಿಸುವಂತಿದ್ದ ಅವರ ಮುಖಭಾವ ಗಂಭೀರವಾಗಿದ್ದರೂ ಪ್ರಶಾಂತವಾಗಿತ್ತು. ಮಿತಭಾಷಿ ಎನ್ನುವುದು ಮೇಲ್ನೋಟಕ್ಕೆ ವ್ಯಕ್ತವಾಗುತ್ತಿತ್ತು. ಸ್ನೇಹಪರತೆ, ದೃಢವಾದ ಆತ್ಮವಿಶ್ವಾಸ, ಕಾಂತಿಯುಕ್ತ ಕಣ್ಣುಗಳು ಇಬ್ಬರನ್ನೂ ಸೆಳೆದುಬಿಟ್ಟಿದ್ದವು. ಅವರ ಮುಖವನ್ನೇ ನೋಡುತ್ತಿದ್ದವರಿಂದ ಉತ್ತರ ನಿರೀಕ್ಷಿಸದೇ ಮನೆಯೊಳಕ್ಕೆ ನಡೆದರು.

ಘನಘೋರ ಕತ್ತಲು, ಜಿಟಿಜಿಟಿ ಮಳೆ, ಗುಡ್ಡದ ಮೇಲಿರುವ ಕಾರಣ ರೊಂಯ್ಯೋ ಎಂದು ಊಳಿಡುವ ಗಾಳಿ ಇವುಗಳ ನಡುವೆ ಆ ಬೆಂಕಿಯ ಜಳ ಇಬ್ಬರಲ್ಲೂ ಚೈತನ್ಯ ಹುಟ್ಟಿಸಿತ್ತು. ಒದ್ದೆಯಾದ ತಮ್ಮ ಬಟ್ಟೆಗಳನ್ನು ಕಳಚಿ ಮೂರ್ತಿರಾಯರು ಕೊಟ್ಟ ಟವೆಲ್ ಉಟ್ಟು ಬೆಂಕಿ ಬೆಳಕಲ್ಲಿ ನೋಡಿದರೆ ಸೊಂಟದ ತನಕ ಉಂಬಳಗಳು ಕಚ್ಚಿ ರಕ್ತ ಹೀರಿ, ರಕ್ತ ಒಸರಿದ ಗುರುತುಗಳು; ಹಲವು ಉಂಬಳಗಳು ಇನ್ನೂ ಕಚ್ಚಿಕೊಂಡೇ ಇದ್ದವು. ಕಚ್ಚಿಕೊಂಡ ಉಂಬಳಗಳನ್ನು ಕಿತ್ತು ಬೆಂಕಿಗೆಸೆದು, ಅವು ಚಟಪಟ ಸುಡುವಾಗ ಈ ಮನೆಯಲ್ಲಿ ಯಾರಾದರೂ ಹೆಂಗಸರಿದ್ದು ನಮ್ಮ ಈ ಅವತಾರ ನೋಡಿದರೆ? ಎನ್ನುವ ಸಂದೇಹವೂ ಅವರಿಗೆ ಬಂತು. ಆದರೆ, ಆ ಮುಜುಗುರಕ್ಕಿಂತ ಮೊದಲು ಉಂಬಳ ಕೀಳುವುದೇ ಮುಖ್ಯ ಎನ್ನುವ ನಿರ್ಧಾರಕ್ಕೆ ಬಂದರು.

ತುಸು ಹೊತ್ತಿನ ಅನಂತರ ಒಂದು ದೊಡ್ಡ ಕಂಚಿನ ಗಿಂಡಿ, ಎರಡು ಹಿತ್ತಾಳೆಯ ಉದ್ದ ಲೋಟದ ಜೊತೆ ಅವರೆದುರು ಬಂದವರು ಒಂದುಕ್ಷಣ ಬೆಚ್ಚಿ ನಿಂತರು. ಇಬ್ಬರ ಮೈತುಂಬ ಹೆಪ್ಪುಗಟ್ಟಿದ ರಕ್ತದ ಕಲೆಗಳು, ಕೆಲವು ಇನ್ನೂ ಒಸರುತ್ತಿರುವ ಚಿಕ್ಕ ಸೆಲೆಗಳು. 'ಏ, ಮಾರಾಯ್ರಾ, ಎಂಥ ಭಾನಗಡಿ ಮಾಡ್ಕಂಡ್ರಿ' ಎಂದು ಉದ್ಗರಿಸಿದವರು, 'ಏನೂ ಹೆದರಬೇಡಿ, ಕಾಫಿ ಕುಡೀರಿ, ಬಿಸಿ ನೀರು ಸಿದ್ಧವಿದೆ. ಚೆನ್ನಾಗಿ ಸ್ನಾನ ಮಾಡಿ' ಎಂದವರು ವಾಪಸ್ಸು ಮನೆಯೊಳಕ್ಕೆ ನಡೆದರು. ಮಾಡಿನ ಕೆಳಗಿದ್ದ ವರಾಂಡ ಬೆಂಕಿಯ ಬೆಳಕಿನಲ್ಲಿ ಹೊಳೆಯುತ್ತಿತ್ತು. ಆದರೆ, ಮನೆಯೊಳಕ್ಕೆ ಮಾತ್ರ ಎದುರಿನ ಜಗಲಿಯಲ್ಲಿ ತೂಗುಬಿದ್ದ ಮಂಕುಬೆಳಕಿನ ಲಾಟೀನು. ಹಾಗಾಗಿ, ಇಬ್ಬರಿಗೂ ಆ ಮನೆಯ ಸ್ವರೂಪ ಅಸ್ಪಷ್ಟವಾಗಿಯೇ ಇತ್ತು. ಸುಡು, ಸುಡುತ್ತಿದ್ದ ಹಾಲು ಬೆರೆಸಿರದ ಕಡುಗಪ್ಪು ಬೆಲ್ಲದ ಕಾಫಿಯನ್ನು ಗುಟುಕರಿಸಿದರೂ ಅವರಿಗೆ ಅದು ಬಿಸಿ ಅನ್ನಿಸಲೇ ಇಲ್ಲ.

ಗಾಜು ಕೂರಿಸಿದ ಕೈಲಾಂದ್ರ ಹಿಡಿದು ಬಂದ ಮೂರ್ತಿ ರಾಯರು ಮನೆಯ ಪಕ್ಕದಿಂದ ಅವರನ್ನು ಹಿಂದುಗಡೆ ಇದ್ದ ಬಚ್ಚಲಿಗೆ ಕರೆದೊಯ್ದರು. ಒಲೆಯೊಳಗಿನ ನಿಗಿನಿಗಿ ಕೆಂಡಗಳ ಪ್ರಭೆ ಬಚ್ಚಲುಮನೆಯಲ್ಲಿ ಓಡಾಡುವಷ್ಟು ಬೆಳಕನ್ನು ಒದಗಿಸಿತ್ತು. ಕಿರು ನೀರಧಾರೆ ನಿರಂತರವಾಗಿ ಹರಿದುಬರುತ್ತ, ಒಂದು ಕಲ್ಲಿನ ಟ್ಯಾಂಕಿಗೆ ಬಿದ್ದು, ಹೊರಚೆಲ್ಲುವುದನ್ನು ಕಂಡು ಮನೀಷ ಬೆರಗಾಗಿಬಿಟ್ಟ. ಅವನಿಗೆ ಇವೆಲ್ಲ ಹೊಸತು. ಸಂತೋಷ ಸಾಕಷ್ಟು ಕಡೆ ಈ ತರಹದವನ್ನು ನೋಡಿದ್ದ. ಮನೀಷನಿಗೆ ಸಂತೋಷ ಇದರ ಬಗ್ಗೆ ಇಂಗ್ಲಿಷ್‌ನಲ್ಲಿ ವಿವರಿಸುತ್ತಿರಬೇಕಾದರೆ ಒಲೆಯೆದುರು ಕೂತು ಕೆಂಡಗಳನ್ನು ಕಟ್ಟಿಗೆಯ ತುಂಡಿನಿಂದ ಈಚೆ ಎಳೆಯುತ್ತಿದ್ದ ಮೂರ್ತಿರಾಯರು ಪಟ್ಟನೆ, 'ನೋ.. ನೋ...' ಎಂದವರು ಥಟ್ಟನೆ ಅಲ್ಲಿಂದ ಎದ್ದು ನಸುಕತ್ತಲಲ್ಲಿ ಮರೆಯಾದರು.

ಇತ್ತ ಕುದಿಕುದಿವ ನೀರು, ಅತ್ತಲಿಂದ ಅನವರತ ಹರಿದುಬರುವ ಕಡುತಣ್ಣಗಿನ ನೀರು, ಅವೆರಡನ್ನು